ಸಸ್ಯಗಳನ್ನು ಬೆಳೆಸಬಹುದು. ಆದರೆ ವಾರಕೊಮ್ಮೆ ನೀರನ್ನು ಬದಲಾವಣೆ ಮಾಡಿದರೆ ಒಳಿತು.

**ತಾರಸಿ ಮೇಲೊಂದು ಹೂದೋಟ:** ಒಂದು ವೇಳೆ ನಿಮಗೆ ತಾರಸಿ ಇದ್ದ ಪಕ್ಷದಲ್ಲಿ ತಾರಸಿಯ ಮೇಲೂ ಹೂದೋಟ ನಿರ್ಮಿಸಬಹುದು. ತಾರಸಿ ಮೇಲೆ ವರ್ಟಿಕಲ್, ಹ್ಯಾಂಗಿಂಗ್, ಸ್ಟೆಪ್‌ವೈಸ್ ಹೀಗೆ ವಿವಿಧ ತೆರನಾದ ಕುಂಡಗಳನ್ನು ಜೋಡಿಸಬಹುದು.

**ಬಾಲ್ಕನಿಯಲ್ಲೊಂದಿಷ್ಟು ಹೂಕುಂಡ:** ಬಾಲ್ಕನಿಯಲ್ಲೂ ಗಿಡಗಳನ್ನು ಬೆಳೆಸಬಹುದು. ಇದರಿಂದ ಮನೆಯ ಹೊರಾಂಗಣ ಸೌಂದರ್ಯವೂ ಇಮ್ಮಡಿಯಾಗುತ್ತದೆ.

**ಮೆಟ್ಟಿಲುಗಳ ಬದಿಯಲ್ಲಿ:** ಮೆಟ್ಟಿಲುಗಳು ಇದ್ದಲ್ಲಿ ಮೆಟ್ಟಿಲುಗಳ ಬದಿಯಲ್ಲೂ ಹೂಕುಂಡಗಳನ್ನು ಜೋಡಿಸಿಕೊಳ್ಳಬಹುದು. ಇದರಿಂದ ಜಾಗದ ಕೊರತೆಯನ್ನು ನೀಗಿಸಬಹುದು.

ಹೂ ಗಿಡಗಳು, ಹಸಿರು ಸಸ್ಯಗಳು ನಮ್ಮ ಅವಿಭಾಜ್ಯ ಅಂಗ. ಖಾಲಿ ಡಬ್ಬಗಳನ್ನು ಬಳಸಿಕೊಂಡು ಹೂಕುಂಡಗಳನ್ನು ಮಾಡಿ ಪರಿಸರ ಸ್ನೇಹಿ ಲೋಕ ಸೃಷ್ಟಿಸಬಹುದು. ಮನೆಯ ಬೇರೆ ಕಡೆಗಳಲ್ಲಿ ಸ್ಥಳವನ್ನು ವ್ಯರ್ಥಮಾಡದೆ ಒಂದು ಸುಂದರ ಸಣ್ಣ ಸಸ್ಯ ಲೋಕವನ್ನೇ ಸೃಷ್ಟಿಸಬಹುದು.







